www.CBSEtips.in

# CENTRAL BOARD OF SECONDARY EDUCATION

## 05. CODE NO. 115
## CLASS XII KANNADA
## 2022 – 2023
## MARKING SCHEME

**One Paper** **3 Hours** **Max. Marks : 80**

ತರಗತಿ : 12 ಸಿಬಿಎಸ್‌ಇ ವಿಷಯ : ಕನ್ನಡ

2022 – 2023

**ಮಾದರಿ ಉತ್ತರ ಪತ್ರಿಕೆ**

ಒಂದು ಪತ್ರಿಕೆ ಸಮಯ : 3 ಗಂಟೆ ಅಂಕಗಳು : 80

---

## PART A Section A

**ಪ್ರಶ್ನೆ 1 ಕೆಳಗಿನವುಗಳಲ್ಲಿ ಯಾವುದಾದರೂ ಒಂದು ಪರಿಚ್ಛೇದವನ್ನು ಆಯ್ಕೆ ಮಾಡಿಕೊಂಡು ಅದರ ಕೆಳಗೆ ಕೊಟ್ಟಿರುವ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿರಿ.** 1 X 5 = 5

1. **I. ತಂತ್ರಜ್ಞಾನದಲ್ಲಿ ಉಂಟಾಗುವ ಹೊಸ ಆವಿಷ್ಕಾರಗಳ ಪರಿಚಯ ಕಾರ್ಮಿಕನಿಗೆ ಸಾಮಾನ್ಯವಾಗಿ ಏಕೆ ಉಂಟಾಗದು?**

B. ಹೊಸ ಅನ್ವೇಷಣೆಯ ಅಥವಾ ಬದಲಾವಣೆಯ ಮಾಹಿತಿ ತಿಳಿಸುವ ಸಾಹಿತ್ಯವನ್ನು ನಾವು ತಜ್ಞರಾದವರಿಗೆ ಮಾತ್ರ ಕೊಡುತ್ತೇವೆ.

**II. ತಜ್ಞರು ಹೇಳಿದಷ್ಟನ್ನೆ ಕಾರ್ಮಿಕ ಮಾಡಲು ಕಾರಣವೇನು?**

A. ಅವನಿಗೆ ಪೂರಕವಾದ ಸಾಹಿತ್ಯವನ್ನು ಒದಗಿಸುತ್ತಿಲ್ಲ.

**III. ತಂತ್ರಜ್ಞಾನದ ಬದಲಾವಣೆ ಕಾರ್ಮಿಕನಿಗೆ ಏಕೆ ತಿಳಿಯುವುದಿಲ್ಲ?**

A. ಬದಲಾವಣೆಯ ಹಿನ್ನೆಲೆಯನ್ನು ತಿಳಿಸುವ ತಂತ್ರಜ್ಞಾನದ ವಿವರ ಅವನಿಗರ್ಥವಾಗುವ ಭಾಷೆಯಲ್ಲಿ ಇರುವುದಿಲ್ಲ.

**IV. ಉತ್ತಮ ಗುಣಮಟ್ಟದ ವಸ್ತುಗಳನ್ನು ಉತ್ಪಾದಿಸಲು ಕಾರ್ಮಿಕನಿಗೆ ಹೇಗೆ ನೆರವಾಗಬಹುದು?**

B. ಕಾರ್ಮಿನಿಗೆ ಪೂರಕವಾದ ಸಾಹಿತ್ಯವನ್ನು ಒದಗಿಸಿದರೆ ಅದರಿಂದ ಅವನ ಸೃಜನಾತ್ಮಕತೆ ಹೆಚ್ಚಾಗಿ, ಉತ್ತಮ ಗುಣಮಟ್ಟದ ವಸ್ತುಗಳನ್ನು ಉತ್ಪಾದಿಸಲು ಅನುಕೂಲವಾಗುತ್ತದೆ.

**V. ವಿದೇಶೀ ಭಾಷೆಯ ಬಳಕೆಯಿಂದ ಕಾರ್ಮಿಕನಿಗಾಗುವ ತೊಂದರೆಯೇನು?**

B. ಬದಲಾವಣೆಯ ಹಿನ್ನೆಲೆಯನ್ನು ತಿಳಿಸುವ ತಂತ್ರಜ್ಞಾನದ ವಿವರ ಅವನಿಗರ್ಥವಾಗುವದಿಲ್ಲ.

**ಅಥವಾ**

**I. ಅರುಣೋದಯ ಸಾಹಿತ್ಯದ ಉದಯಕ್ಕೆ ಕಾರಣವೇನು?**

A. ಪಾಶ್ಚಾತ್ಯದ ಸಂಪರ್ಕದ ಪರಿಣಾಮ

**II. ಪಾಶ್ಚಾತ್ಯರ ಸಂಪರ್ಕದಿಂದ ನಮ್ಮ ಜೀವನ ಕ್ರಮದಲ್ಲುಂಟಾದ ಬದಲಾವಣೆಯೇನು?**

C. ಮಧ್ಯಯುಗೀನ ಪಾಳೆಯಗಾರಿಕಾ ಪದ್ಧತಿ ಹೊರಟುಹೋಯಿತು.

**III. ಪಾಶ್ಚಾತ್ಯ ಸಂಪರ್ಕದ ಮೊದಲು ನಮ್ಮ ಜೀವನ ಕ್ರಮ ಏನಾಗಿತ್ತು?**

B. ಮತಧರ್ಮಗಳ ಕಟ್ಟುಪಾಡಿನಲ್ಲಿದ್ದ ನಮ್ಮ ಜೀವನಕ್ರಮವು ಅದುವರೆಗೆ ಸಮಷ್ಟಿಯಾಗಿತ್ತು.

**IV. ಯಾವುದರ ಪಡಿನೆಳಲು ಸಾಹಿತ್ಯದಲ್ಲಿಯೂ ಕಂಡುಬಂದಿತು?**

A. ಪಾಶ್ಚಾತ್ಯ ಪ್ರಣಾಲಿ

**V. ಭಾಷಾ–ಸಾಹಿತ್ಯಗಳ ಸ್ವರೂಪ ಸಮಾನ ಲಕ್ಷಣದಿಂದ ಬೆಳೆಯಲು ಕಾರಣವೇನು?**

A. ಪಾಶ್ಚಾತ್ಯ ಸಂಪರ್ಕ.

**ಪ್ರಶ್ನೆ 2. ಕೆಳಗಿನವುಗಳಲ್ಲಿ ಯಾವುದಾದರೂ ಒಂದು ಪರಿಚ್ಛೇದವನ್ನು ಆಯ್ಕೆ ಮಾಡಿಕೊಂಡು ಅದರ ಕೆಳಗೆ ಕೊಟ್ಟಿರುವ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿರಿ.** 1 X 5 = 5

**I. ಭಾರತೀಯತೆಯ ಪ್ರಾದುರ್ಭಾವ ಹೇಗೆ ಉಂಟಾಯಿತು?**

A. ಭಾರತದ ಮೂಲ ನಿವಾಸಿಗಳೊಡನೆ ಸಮ್ಮಿಲನಗೊಂಡು

**II. ಪ್ರಾಚೀನ ಕಾಲದಲ್ಲಿ ನಾಗರಿಕರೊಳಗೆ ಸಂವಹನ ಮಾಧ್ಯಮ ಯಾವುದಾಗಿತ್ತು?**

B. ಸಂಸ್ಕೃತ

**III. ಯಾವುದನ್ನು ಪವಾಡ ಎಂದು ಲೇಖಕರು ಕರೆದಿದ್ದಾರೆ?**

B. ಜನರು ಸಂಸ್ಕೃತಿ ಮತ್ತು ಚಿಂತನೆಗಳ ಮೇಲೆ ಹತೋಟಿಯನ್ನಿಟ್ಟುಕೊಂಡುದು

**IV. ಭಾಷಾ ಪ್ರಭೇದಗಳು ಹುಟ್ಟಲು ಏನು ಕಾರಣ?**

C. ಜನಸಾಮಾನ್ಯರ ಚಿಂತನೆಗಳು

**V. ದೇಶೀಯ ಸಾಹಿತ್ಯ ಹೇಗೆ ವೈವಿಧ್ಯಮಯವಾಯಿತು?**

A. ಜೈನ–ಬೌದ್ಧ ಜ್ಞಾನಿಗಳು ಜನಸಾಮಾನ್ಯರ ಭಾಷೆಯನ್ನೇ ಆಯ್ದುಕೊಂಡು ಅದರಲ್ಲಿ ಕೃತಿ ರಚನೆ ಮಾಡಲು ಆರಂಭಿಸಿದ್ದರಿಂದ

**ಅಥವಾ**

**I. ಕನ್ನಡದಲ್ಲಿ ಸಂಗೀತದ ಬಳಕೆ ಮಾಡುವ ಮುನ್ನ ನಾವು ನಿಶ್ಚಯಿಸಬೇಕಾದ ಪ್ರಶ್ನೆ ಯಾವುದು?**

A. ಕನ್ನಡಕ್ಕಾಗಿ ಸಂಗೀತವೇ ಅಥವಾ ಸಂಗೀತಕ್ಕಾಗಿ ಕನ್ನಡವೇ?

**II. ಸಂಗೀತ ರಚನೆಯಲ್ಲಿ ಎಷ್ಟು ವಿಧಗಳಿವೆ?**

B. ಮೂರು

**III.ಸಾಹಿತ್ಯವನ್ನು ಕಡ್ಡಾಯವಾಗಿ ಸಂಗೀತದೊಡನೆ ಸೇರಿಸಿದರೆ ಏನಾಗುವುದು?**

A. ಸಾಹಿತ್ಯ ಮತ್ತು ಸಂಗೀತಪ್ರಿಯರಿಬ್ಬರ ಕಿವಿಗೂ ಹಿತಕರವಾಗಿರುವುದು

**IV.ಸಾಹಿತ್ಯದ ಪಾತ್ರ ಅಪ್ರಧಾನವಿರುವ ಸಂಗೀತ ರಚನೆಯಿಂದ ಯಾವ ಪರಿಣಾಮ ಉಂಟಾಗುವುದು?**

D ರಾಗವನ್ನು ಹರಡಿದಾಗ ಅಲ್ಲಲ್ಲಿ ತಗಲು ಹಾಕಲು ಇರುವ ಮೊಳೆಗಳಂತೆ ಇರುವುದು.

**V.ಸಾಹಿತ್ಯ ಪ್ರಧಾನವಾದ ಸಂಗೀತ ರಚನೆಯಲ್ಲಿ ಸಂಗೀತದ ಪಾತ್ರವೇನು?**

A. ಸಂಗೀತವು ಸಾಹಿತ್ಯದ ಅಂದವನ್ನು, ರುಚಿಯನ್ನು ಮೇಕಪ್ ಮಾಡುವ ಸಾಧನದಂತೆ ಮಹತ್ವದ್ದಾಗಿರುತ್ತದೆ.

## Section B

**ಪ್ರಶ್ನೆ 3. ಕೆಳಗೆ ವ್ಯಾಕರಣಾಂಶಗಳ ಬಹು ಆಯ್ಕೆಯ 5 ಪ್ರಶ್ನೆಗಳಿವೆ. ಅವುಗಳಲ್ಲಿ ಯಾವುದಾದರೂ 4 ಪ್ರಶ್ನೆಗಳಿಗೆ ಉತ್ತರಿಸಿರಿ.** 1 x 4 = 4

**I. ಕೆಳಗಿನ ವಾಕ್ಯವನ್ನು ಪ್ರಶ್ನಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ.**

A. ರಾಮನು ಪೇಟೆಗೆ ಹೋದನೆ?

**II. ಕೆಳಗಿನ ವಾಕ್ಯವನ್ನು ನಿಷೇಧಾರ್ಥದಲ್ಲಿ ಬಳಸಿ.**

A. ಬಸವಣ್ಣನವರು ಕಲ್ಯಾಣದಲ್ಲಿ ಕ್ರಾಂತಿ ಮಾಡಲಿಲ್ಲ.

**III. ಕೆಳಗಿನ ಪದದ ಗ್ರಾಂಥಿಕ ರೂಪ ಬರೆಯಿರಿ.**

B. ನಿನ್ನನ್ನು ಯಾರೂ

**IV. ಕೆಳಗಿನ ವಾಕ್ಯವನ್ನು ಭವಿಷ್ಯತ್ ಕಾಲಕ್ಕೆ ಪರಿವರ್ತಿಸಿ.**

A. ಕುಮಾರನು ಓಟದ ಪಂದ್ಯದಲ್ಲಿ ಓಡುವನು.

**V ಕೆಳಗಿನ ವಾಕ್ಯದಲ್ಲಿರುವ ಕ್ರಿಯಾಪದದ ಧಾತುವನ್ನು ತಿಳಿಸಿ.**

D. ಹಿಡಿ, ಕಟ್ಟು.

**ಪ್ರಶ್ನೆ 4. ಕೆಳಗೆ ವ್ಯಾಕರಣಾಂಶಗಳ ಬಹು ಆಯ್ಕೆಯ 5 ಪ್ರಶ್ನೆಗಳಿವೆ. ಅವುಗಳಲ್ಲಿ ಯಾವುದಾದರೂ 4 ಪ್ರಶ್ನೆಗಳಿಗೆ ಉತ್ತರಿಸಿರಿ.** 1 x 4 = 4

**I ಕೆಳಗಿನ ಪದ ಬಿಡಿಸಿ ಬರೆಯಿರಿ.**

B. ಆರಿಗೆ+ಉಸುರುವೆನು+ಆರ

**II. ಕೆಳಗಿನ ಪದದ ವಿಭಕ್ತಿ ಪ್ರತ್ಯಯ ಹೆಸರಿಸಿ.**

D. ಸಪ್ತಮೀ ವಿಭಕ್ತಿ ಪ್ರತ್ಯಯ

**III. ಕೆಳಗಿನ ಪದದ ತತ್ಸಮ ತದ್ಭವ ರೂಪ ಬರೆಯಿರಿ.**

C. ಜೋಗಿ

**IV. ಕೆಳಗಿನ ಪದದ ಸಮಾನಾರ್ಥಕ ಪದಗಳನ್ನು ಬರೆಯಿರಿ.**

B. ನೀರು, ಜಲ

**V. ಕೆಳಗಿನ ಪದದ ಅನೇಕಾರ್ಥಗಳನ್ನು ಬರೆಯಿರಿ.**

D. ರೀತಿ, ಮನಸ್ಸು.

**ಪ್ರಶ್ನೆ 5. ಕೆಳಗೆ ವ್ಯಾಕರಣಾಂಶಗಳ ಬಹು ಆಯ್ಕೆಯ 5 ಪ್ರಶ್ನೆಗಳಿವೆ. ಅವುಗಳಲ್ಲಿ ಯಾವುದಾದರೂ 4 ಪ್ರಶ್ನೆಗಳಿಗೆ ಉತ್ತರಿಸಿರಿ.** 1 x 4= 4

**I. ಕೆಳಗಿನ ವಾಕ್ಯವನ್ನು ಸಾಮಾನ್ಯ ವಾಕ್ಯಗಳನ್ನಾಗಿ ಪರಿವರ್ತಿಸಿ.**

C. ರಮೇಶನು ತನ್ನ ಗೆಳೆಯ ಮಹೇಶನನ್ನು ನೋಡಲು ಹೋದನು. ಆದರೂ ಆತ ಅವನಿಗೆ ಸಿಗಲಿಲ್ಲ.

**II. ಕೆಳಗಿನ ಪದ್ಯಭಾಗದ ಛಂದಸ್ಸಿನ ಹೆಸರು ತಿಳಿಸಿ.**

A. ಇದು ಕಂದ ಪದ್ಯದ ಛಂದಸ್ಸು.

**III. ಕೆಳಗಿನ ಗಾದೆಯ ಸರಿಯಾದ ಅರ್ಥಸಾರವನ್ನು ಆರಿಸಿ ಬರೆಯಿರಿ.**

A.ಯಾವುದನ್ನೇ ಆಗಲಿ, ಹಂತ ಹಂತವಾಗಿ ಸಾಧಿಸುತ್ತ ಮೇಲೆ ಮೇಲಕ್ಕೆ ಹೋಗಬೇಕು. ಅಂದರೆ ಮಾತ್ರ ಬದುಕಿನಲ್ಲಿ ಏನನ್ನು ಬೇಕಾದರೂ ಸಾಧಿಸಬಹುದು.

**IV.ಕೆಳಗಿನ ವಾಕ್ಯವನ್ನು ಅಪೂರ್ಣ ಭವಿಷ್ಯತ್ ಕಾಲ ಮತ್ತು ಭೂತಕಾಲಕ್ಕೆ ಬದಲಿಸಿರಿ.**

D. ರಾಮನು ಶಾಲೆಗೆ ಹೋಗಬಹುದು ಮತ್ತು ಹೋಗಲಿಲ್ಲ.

**V. ಕೆಳಗಿನ ವಾಕ್ಯದಲ್ಲಿರುವ ಕರ್ಮಪದ ಮತ್ತು ವಿಧ್ಯರ್ಥಕ ಪದಗಳನ್ನು ಗುರುತಿಸಿ ಬರೆಯಿರಿ.**

B. ಮಕ್ಕಳು, ಆಟವಾಡಲಿ.

**ಪ್ರಶ್ನೆ 6. ಕೆಳಗೆ ವ್ಯಾಕರಣಾಂಶಗಳ ಬಹು ಆಯ್ಕೆಯ 5 ಪ್ರಶ್ನೆಗಳಿವೆ. 4 ಪ್ರಶ್ನೆಗಳಿಗೆ ಉತ್ತರಿಸಿರಿ.** 1 x 4= 4

**I. ಕೆಳಗಿನ ಪದದ ಸಂಧಿ ಹೆಸರಿಸಿರಿ**

C ಗುಣ ಸಂಧಿ

**II. ಕೆಳಗಿ ಪದದ ಸಮಾಸ ಹೆಸರಿಸಿರಿ**

D ಬಹುವ್ರೀಹಿ ಸಮಾಸ

**III. ಕೆಳಗಿನ ವಾಕ್ಯವನ್ನು ಕರ್ಮಣಿ ವಾಕ್ಯವನ್ನಾಗಿ ಬದಲಿಸಿರಿ.**

A ರಾಮನಿಂದ ಹಣ್ಣು ತಿನ್ನಲ್ಪಟ್ಟಿತು

**IV. ಕೆಳಗಿನ ಆಂಗ್ಲ ವಾಕ್ಯದ ಸರಿಯಾದ ಕನ್ನಡ ರೂಪಾಂತರ ಆರಿಸಿ ಬರೆಯಿರಿ.**

Self dependancy is verymuch needed to all; especially developing countries like India, it is a must.

A ಸ್ವಾವಲಂಬನೆ ಎನ್ನುವುದು ಪ್ರತಿಯೊಬ್ಬರಿಗೂ ಅತಿ ಅಗತ್ಯವಾಗಿದೆ. ವಿಶೇಷತಃ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರದಂತಹ ಭಾರತ ದೇಶಕ್ಕೆ ಇದು ಇಂದಿನ ಅಗತ್ಯವಾಗಿದೆ.

## Section C

**ಪ್ರಶ್ನೆ 7. ಕೆಳಗಿನ ಪದ್ಯಭಾಗ ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಬಹುಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿರಿ.** 1 x 4 = 4

**I. ಕವಯಿತ್ರಿ ಏನನ್ನು ಕಾಣುತ್ತಿದ್ದಾರೆ?**

D. ಸತ್ತ ದನಗಳ ಕಿತ್ತು ತಿನ್ನುವುದನ್ನು.

**II. ಜನ, ದನಗಳಿಗೆ ಏನಿಲ್ಲ?**

D. ಜನ, ದನಗಳಿಗೆ ನೀರು, ಮೇವಿಲ್ಲ.

**III. ಕವಯಿತ್ರಿ ಮುಗಿಲತ್ತ ಕೈಚಾಚಿದ್ದೇಕೆ?**

B. ಅವರ ಸ್ಥಿತಿ ನೋಡಲಾಗದೆ

**IV. ಕವಯಿತ್ರಿಯಲ್ಲಿ ಎಂತಹ ಛಲ ಮೂಡುತ್ತದೆ?**

C. ತಮ್ಮ ಕಂಬನಿಯ ಲಾವಾರಸದಲ್ಲಿ ವಿಶ್ವವನ್ನೇ ಮುಳುಗಿಸಿಬಿಡುವ

**ಪ್ರಶ್ನೆ 8. ಕೆಳಗಿನ ಗದ್ಯಭಾಗ ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಬಹುಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿರಿ.** 1 x 5 = 5

**I.ಬದುಕು ಯಾವುದನ್ನು ಬಿಟ್ಟು ಇರುವುದಿಲ್ಲ?**

C. ಭಾಷೆಯನ್ನು

**II.ನಾವು ಯಾವ ಅಪಸ್ವರವನ್ನು ಕೇಳಿದ್ದೇವೆ?**

C. ಬೆಂಗಳೂರು ಕೇಂದ್ರಾಡಳಿತ ನಗರವಾಗಬೇಕು

**III.ನೆರೆಹೊರೆಯವರು ಏನನ್ನು ಆಕ್ರಮಿಸಿಕೊಂಡು ಬಿಡುತ್ತಾರೆ?**

B. ರಾಜ್ಯ ಸರ್ಕಾರದ ನೌಕರಿಗಳನ್ನು ಮತ್ತು ರಾಜ್ಯ ಸರ್ಕಾರದ ಉದ್ಯಮಗಳನ್ನು

**IV.ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯವೇನು?**

B. ರಾಜ್ಯದಲ್ಲಿ ಸ್ಥಾಪಿತವಾಗುವ ಕೇಂದ್ರ ಉದ್ಯಮಗಳಲ್ಲಿ ಕನ್ನಡಿಗರಿಗೆ ದೊರೆಯಬೇಕಾದ ಪಾಲು ದೊರೆಯುವುದಿಲ್ಲ.

**V.ಕನ್ನಡಿಗರು ಅಲ್ಪಸಂಖ್ಯಾತರಾಗಲು ಕಾರಣವೇನು?**

C. ಕನ್ನಡಿಗರ ಔದಾರ್ಯ ಧೋರಣೆ

**ಪ್ರಶ್ನೆ 9 ಕೆಳಗಿನ ಗದ್ಯಭಾಗ ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಬಹುಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿರಿ.** 1 x 5 = 5

**I.ವಿಚಿತ್ರ ವಿದ್ಯಮಾನಗಳು ಎಲ್ಲಿ ನಡೆದವು?**

C. ಸುಬ್ಬಣ್ಣನ ಮನೆಯ ಹಿತ್ತಿಲಲ್ಲಿ

**II.ಕೊಟ್ಟಿಗೆಯನ್ನು ಬೀಳಿಸಿದ್ದು ಯಾರು?**

D. ಕೃಷ್ಣೇಗೌಡರ ಆನೆ

**III.ವಿಚಿತ್ರ ವಿದ್ಯಮಾನ ಯಾವುದು?**

B. ಕೊಟ್ಟಿಗೆಯ ಮಾಡು ಕುಸಿದು ಬಿದ್ದಿದ್ದು

**IV.ಮೇಕೆಗಳು ಏಕೆ ಅರಚಲು ಶುರುಮಾಡಿದವು?**

D. ಕೊಟ್ಟಿಗೆಯ ಮಾಡು ಕುಸಿದು ಬಿದ್ದಿದ್ದರಿಂದ

**V.ಜನರು ಯಾರನ್ನು ನಿಂದಿಸತೊಡಗಿದರು?**

A. ಕೃಷ್ಣೇಗೌಡರ ಆನೆಯನ್ನು.

## PART B Section D

**ಪ್ರಶ್ನೆ 10. ಕೆಳಗಿನವುಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.** 2 x 3 = 06

**I. ಸೀತಾಳ ಬಯಕೆ, ನಂಬಿಕೆಗಳು ಹೇಗಿದ್ದವು?**

ನಾವು ಬಯಸಿದ್ದು ತಕ್ಷಣ ಕೈಗೆ ಸಿಗಬೇಕು. ತಟ್ಟನೆ ಎಲ್ಲವೂ ಸರಿಹೋಗಬೇಕು. ಗಂಡನಾದವನು ಕೈತುಂಬ ಸಂಪಾದಿಸಬೇಕು. ಹೆಂಡತಿಯನ್ನು ಚೆನ್ನಾಗಿ ಇಟ್ಟುಕೊಳ್ಳಬೇಕಾದುದು ಗಂಡನ ಜವಾಬ್ದಾರಿ ಎಂಬುದು ಸೀತಾಳ ಬಯಕೆ, ನಂಬಿಕೆಗಳಾಗಿದ್ದವು.

**II. ದುರ್ಜನರ ಕಾರ್ಯ ಯಾವ ಬಗೆಯದು?**

ದುರ್ಜನರು ಇನ್ನೊಬ್ಬರಿಗೆ ಸ್ವಲ್ಪವೂ ಉಪಕಾರ ಮಾಡುವುದಿಲ್ಲ. ಹಾಗೆಂದು ನುಣ್ಣಗೆ, ತೋರಿಕೆಗೆ ಮಾತ್ರ ಚೆನ್ನಾಗಿ ಮಾತನಾಡುತ್ತಾರೆ. ಇಂಥವರು ಅನ್ನಕ್ಕಾಗಿ ಸೇರುವ ಕುನ್ನಿಗಳಂತೆ ಇರುತ್ತಾರೆ. ಇದು ದುರ್ಜನರ ಕಾರ್ಯದ ಬಗೆ.

**III ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ತ್ರಾಸಾದುದೇಕೆ?**

ವೇಲಾಯುಧ ದಿನದ ಇಪ್ಪತ್ತನಾಲ್ಕು ಗಂಟೆಯೂ ಕುಡಿದೇ ಇರುತ್ತಿದ್ದ. ಇದರಿಂದ ಆತ ಮಠದ ಸಾತ್ವಿಕ ವಾತಾವರಣಕ್ಕೆ ತಲೆನೋವಾಗಿದ್ದ. ದುರ್ನಡತೆಗಾಗಿ ಅವನಿಗೆ ಛೀಮಾರಿ ಹಾಕಿ ಒಮ್ಮೆ ಓಡಿಸಿದರೂ ಆತ ತನ್ನ ನಡತೆ ಬದಲಿಸಿರಲಿಲ್ಲ. ಆದ್ದರಿಂದ ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ತ್ರಾಸಾಗುತ್ತಿತ್ತು.

**ಪ್ರಶ್ನೆ 11.ಕೆಳಗಿನ ಪ್ರಶ್ನೆಗಳಿಗೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ.** 3 x 3 = 09

**I.'ಅದೃಷ್ಟವನ್ನೇ' ಅವಲಂಬಿಸಿ ಬದುಕಲು ಸಾಧ್ಯವೇ?**

ಪಾಠ : 'ಆಯ್ಕೆಯಿದೆ ನಮ್ಮ ಕೈಯಲ್ಲಿ' ಲೇಖಕರು : ನೇಮಿಚಂದ್ರ.

www.CBSEtips.in

ಸಂದರ್ಭ : ಲೇಖಕಿಯವರ ಪತಿ ಕೀರ್ತಿಯವರಿಗೆ ಒಮ್ಮೆ ಕೆಳಹೊಟ್ಟೆ ನೋವು ಕಾಣಿಸಿಕೊಂಡಿತು. ಆಗ ಕೆಲವರು ಅವರ ಖಾಯಿಲೆಯ ಬಗ್ಗೆ ಮಾತನಾಡುತ್ತ ಈ ಮಾತನ್ನು ಹೇಳಿದರು ಎಂದು ಹೇಳುವ ಸಂದರ್ಭದಲ್ಲಿ ಲೇಖಕಿ ಈ ಮಾತನ್ನು ಹೇಳಿದ್ದಾರೆ.

ವಿವರಣೆ: ವ್ಯಕ್ತಿಗೆ ಖಾಯಿಲೆ ಬಂದಾಗ ಮೊದಲು ಅದರ ಕಾರಣ ತಿಳಿದುಕೊಂಡು, ಅದಕ್ಕೆ ವೈದ್ಯರ ಬಳಿ ಸರಿಯಾದ ಚಿಕಿತ್ಸೆ ಕೊಡಿಸಬೇಕು. ಅದರ ಬದಲು ಅದೃಷ್ಟದ ಮೇಲೆ ಭಾರ ಹಾಕಿ ಮೂಢನಂಬಿಕೆಯಿಂದ ಕೈಕಟ್ಟಿ ಕುಳಿತರೆ ಬದುಕು ನಾಶವಾಗುತ್ತದೆ ಎಂಬುದು ಇದರ ಅರ್ಥವಾಗಿದೆ. ಜನರಲ್ಲಿ ವಸ್ತುಸ್ಥಿತಿ ಪರಿಜ್ಞಾನ ಮತ್ತು ವೈಚಾರಿಕತೆ ಇರಬೇಕು ಎಂಬುದನ್ನು ಇದು ಸೂಚಿಸುತ್ತದೆ.

**II. ಮರ್ಕಟನ ಕೈಯಲ್ಲಿ ಮಾಣಿಕ್ಯವಿದ್ದು ಫಲವೇನು?**

ಪದ್ಯ : 'ಬಸವಣ್ಣನವರ ವಚನಗಳು' ಕವಿ : ಬಸವಣ್ಣ.

ಸಂದರ್ಭ : ಎಂಥವರ ಕೈಯಲ್ಲಿ ಏನಿದ್ದರೆ ನಿಷ್ಫಲವಾಗುತ್ತದೆ ಮತ್ತು ಒಂದು ವಸ್ತುವಿನ ಸಾರ್ಥಕತೆ ಯಾವಾಗ ಆಗುತ್ತದೆ ಎಂದು ಹೇಳುವ ಸಂದರ್ಭದಲ್ಲಿ ಬಸವಣ್ಣನವರು ಈ ಮಾತನ್ನು ಹೇಳಿದ್ದಾರೆ.

ಅರ್ಥ : ಯಾರಿಗೆ ಯಾವುದರ ಬೆಲೆ ಗೊತ್ತಿರುವುದೋ ಅದು ಅವರ ಕೈಯಲ್ಲಿದ್ದಾಗ ಮಾತ್ರ ಅದಕ್ಕೆ ಬೆಲೆ ಬರುತ್ತದೆ. ಮಂಗನ ಕೈಗೆ ಮಾಣಿಕ್ಯ ಕೊಟ್ಟರೆ ಅದು ಅದನ್ನು ಮೂಸಿ ನೋಡಿ ಬಿಸಾಕುತ್ತದೆ. ಏಕೆಂದರೆ ಮಾಣಿಕ್ಯದ ಬೆಲೆ ಅದಕ್ಕೆ ಗೊತ್ತಿರುವುದಿಲ್ಲ. ಹಾಗೆಯೇ ಮನುಷ್ಯರ ಅಜ್ಞಾನವೂ ಕೂಡ ಇರುತ್ತದೆ ಎಂಬುದು ಇದರ ಅರ್ಥವಾಗಿದೆ.

**III. "ಆನೆಗೂ ಮಾನಮರ್ಯಾದೆ ಇರುತ್ತೆ ತಿಳುಕೋ"**

ಆಯ್ಕೆ : ದೀರ್ಘ ಗದ್ಯ : 'ಕೃಷ್ಣೇಗೌಡನ ಆನೆ' ಲೇಖಕರು : ಪೂರ್ಣಚಂದ್ರ ತೇಜಸ್ವಿ.

ಸಂದರ್ಭ : ಕೃಷ್ಣೇಗೌಡರ ಆನೆ ಒಮ್ಮೆ ರಹಮಾನ್ ಸಾಬಿಯ ಪೆಟ್ಟಿಗೆ ಅಂಗಡಿಯನ್ನು ದೂಡಿ ಬೀಳಿಸಿತು. ಆಗ ರಹಮಾನ್ ಸಾಬಿಗೆ ಜನರು ಈ ಮಾತನ್ನು ಹೇಳಿದರು.

ವಿವರಣೆ : ಆನೆ ತನ್ನ ಅಂಗಡಿಯನ್ನು ಬೀಳಿಸಿದಾಗ ರಹಮಾನ್ ಅದಕ್ಕೆ ಸುಳ್ಳು ಕಾರಣ ಹೇಳಿದ. ಆಗ ಆತನ ಹೆಂಡತಿ ಆತ ಕೆಟ್ಟ ಶಬ್ದ ಬೈದಿದ್ದ ಎಂದು ಹೇಳಿದಳು. ಆಗ ಜನರು ಆನೆ ಮೂಕ ಪ್ರಾಣಿಯಾಗಿದ್ದರೂ ಅದಕ್ಕೂ ಮಾನ ಮರ್ಯಾದೆ ಇರುತ್ತದೆ ಎಂದು ಹೇಳಿದರು. ಪ್ರಾಣಿಗಳ ಕುರಿತು ಜನರಿಗಿರುವ ನಂಬಿಕೆಯನ್ನು ಇದು ತೋರಿಸಿಕೊಡುತ್ತದೆ.

**ಪ್ರಶ್ನೆ 12. ಕೆಳಗಿನ ಕವಿ/ಲೇಖಕರಲ್ಲಿ ಯಾರಾದರೂ ಒಬ್ಬರ ಬಗ್ಗೆ ಆರೇಳು ವಾಕ್ಯಗಳಲ್ಲಿ ಬರೆಯಿರಿ.** 3 x 1 = 03

1. **ಪುಲಿಗೆರೆ ಸೋಮನಾಥ** : ಸುಮಾರು 16ನೆಯ ಶತಮಾನದಲ್ಲಿದ್ದ ವೀರಶೈವ ಕವಿ. 'ಸೋಮೇಶ್ವರ ಶತಕ' ಎಂಬ ಗ್ರಂಥದ ಕರ್ತೃ. ಧಾರವಾಡ ಜಿಲ್ಲೆಯಲ್ಲಿಯ ಪುಲಿಗೆರೆ ಈತನ ಜನ್ಮಸ್ಥಳವಿರಬಹುದೆಂದು ವಿದ್ವಾಂಸರು ಊಹಿಸಿದ್ದಾರೆ. ಈತನ ಶತಕಗಳ ಅಂಕಿತ 'ಹರಹರಾ ಸೋಮೇಶ್ವರಾ ಶ್ರೀ ಚೆನ್ನ ಸೋಮೇಶ್ವರಾ' ಮೊದಲ ಹಾಗೂ ಕೊನೆಯ ಪದ್ಯಗಳನ್ನು ಸ್ರಗ್ಧರಾ ವೃತ್ತದಲ್ಲಿ ರಚಿಸಿದ್ದು, ಉಳಿದವನ್ನು ಮತ್ತೇಭವಿಕ್ರೀಡಿತದಲ್ಲಿ ರಚಿಸಿದ್ದಾನೆ. ಈತನ ಶತಕದ ಪ್ರತಿಯೊಂದು ಪದ್ಯವೂ ಒಂದು ಮುಕ್ತಕ, ಸ್ವಯಂಪೂರ್ಣ ಭಾವವುಳ್ಳ ಸ್ವತಂತ್ರ ಪದ್ಯಗಳಾಗಿವೆ. ಲವಲವಿಕೆಯ ಶೈಲಿ, ಉಪಮೆಗಳ ಸೊಗಸಿನಿಂದಾಗಿ ಸೋಮೇಶ್ವರ ಶತಕ ಕನ್ನಡಿಗರ ಮನ ಗೆದ್ದಿದೆ.

2. **ಮುದ್ದಣ** : 'ಮುದ್ದಣ' ಎಂಬುದು ಲಕ್ಷ್ಮೀನಾರಾಯಣಪ್ಪ ಎಂಬ ಕವಿಯ ಕಾವ್ಯನಾಮ. ಉಡುಪಿ ಜಿಲ್ಲೆಯ ನಂದಳಿಕೆ ಎಂಬ ಗ್ರಾಮ ಈತನ ಹುಟ್ಟೂರು. ಪಾತಾಳಿ ತಿಮ್ಮಪ್ಪಯ್ಯ ಮತ್ತು ಮಹಾಲಕ್ಷ್ಮಮ್ಮ ಈತನ ತಂದೆತಾಯಿಗಳು. ಬಡತನ ಮತ್ತು ಕ್ಷಯರೋಗಕ್ಕೆ ತುತ್ತಾಗಿ ಚಿಕ್ಕವಯಸ್ಸಿನಲ್ಲೇ ತೀರಿಕೊಂಡ ಮುದ್ದಣ ಉಡುಪಿಯ ಹೈಸ್ಕೂಲಿನಲ್ಲಿ ವ್ಯಾಯಾಮ ಶಿಕ್ಷಕನಾಗಿಯೂ, ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಕನ್ನಡ ಪಂಡಿತನಾಗಿಯೂ ಕೆಲಸ ನಿರ್ವಹಿಸಿದ್ದನು. 'ಅದ್ಭುತ ರಾಮಾಯಣ', 'ಶ್ರೀರಾಮ ಪಟ್ಟಾಭಿಷೇಕ', 'ರಾಮಾಶ್ವಮೇಧ' ಮುಂತಾದ ಕೃತಿಗಳನ್ನು ಈತ ರಚಿಸಿರುವನು. 'ರತ್ನಾವತೀ ಕಲ್ಯಾಣ', 'ಕುಮಾರ ವಿಜಯ' ಎಂಬ ಎರಡು ಯಕ್ಷಗಾನ ಕೃತಿ ರಚಿಸಿದ್ದಾನೆ. ವಾಲ್ಮೀಕಿ ರಾಮಾಯಣ ಮತ್ತು ಭಗವದ್ಗೀತೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾನೆ. 'ಗೋದಾವರಿ' ಎಂಬ ಅಪೂರ್ಣ ಕಾದಂಬರಿಯನ್ನು ಈತ ರಚಿಸಿದ್ದನು.

3. **ಡಾ. ಹಾ. ಮಾ. ನಾಯಕ** : ಹಾಮಾನಾ ಎಂದೇ ಪ್ರಸಿದ್ಧರಾಗಿರುವ ಡಾ. ಹಾರೋಗದ್ದೆ ಮಾನಪ್ಪ ನಾಯಕ ಅವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಹಾರೋಗದ್ದೆಯವರು. ಶ್ರೀನಿವಾಸ ನಾಯಕ–ರುಕ್ಮಿಣಿಯಮ್ಮ ದಂಪತಿಗಳ ಸುಪುತ್ರರು. ಮೈಸೂರು ವಿ.ವಿ.ಯ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ, ಗುಲಬರ್ಗಾ ವಿ.ವಿ.ಯ ಕುಲಪತಿಗಳಾಗಿ ಕಾರ್ಯ ನಿರ್ವಹಿಸಿದ್ದಾರೆ. 'ಕನ್ನಡದ ಕಟ್ಟಾಳು' ಎಂದೇ ತಮ್ಮನ್ನು ಗುರುತಿಸಿಕೊಂಡಿದ್ದರು. ತಮ್ಮ 'ಸಂಪ್ರತಿ' ಎಂಬ ಪತ್ರಿಕಾ ಅಂಕಣ ಬರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದ್ದಾರೆ. 57ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಬಾಳ್ನೋಟಗಳು, ಸಂಪ್ರತಿ, ಸಲ್ಲಾಪ, ಸಂಭ್ರಮ, ಸೂಲಂಗಿ, ಸಂಪಣ, ಭಾರತದ ಧರ್ಮ, ರವೀಂದ್ರನಾಥ ಠಾಕೂರ್, ಸಂಗತಿ, ನಮ್ಮ ಮನೆಯ ದೀಪ ಮುಂತಾದ ನೂರಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ.

**ಪ್ರಶ್ನೆ 13. ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.** 4 x 3 = 12

**I.ಬೆಳ್ಳಿಲೋಟ ಕಂಡಾಗ ಧಣಿಯಲ್ಲಿ ಆತಂಕ, ಗಾಬರಿ, ಭಯ ಉಂಟಾಗಲು ಕಾರಣವೇನು?**

ಕಳೆದು ಹೋಗಿದ್ದ ಬೆಳ್ಳಿಲೋಟ ಹೂಳು ತುಂಬಿದ ಮಣ್ಣಿನಲ್ಲಿ ಮತ್ತೆ ಸಿಕ್ಕಿತು. ಆದರೆ ಬೆಳ್ಳಿಲೋಟ ಕಳವಿನ ಅಪವಾದವನ್ನು ಕುದುಪನ ಮೇಲೆ ಹೊರಿಸಲಾಗಿತ್ತು. ಅದಕ್ಕಾಗಿ ಧಣಿ ಕುದುಪನ ಮನೆಯವರನ್ನೆಲ್ಲ ಹಂಗಿಸುತ್ತಿದ್ದರು. ಅದೇ ಕಾರಣಕ್ಕಾಗಿ ಅವರನ್ನೆಲ್ಲ ಇನ್ನಷ್ಟು ಕೀಳಾಗಿ ಕಾಣುತ್ತಿದ್ದರು. ಅದಕ್ಕಾಗಿ ಧಣಿಗಳು ಕುದುಪನ ಮಗನನ್ನು ಮರಕ್ಕೆ ಕಟ್ಟಿ ಹೊಡೆದಿದ್ದರು. ಆದರೆ ಈಗ ಅದು ಧಣಿಗಳ ಎದುರೇ ಹೊಳೆಯ ಹೂಳು ತೆಗೆಯುವಾಗ ಮತ್ತೆ ಸಿಕ್ಕಿತು. ಆಗ ಕುದುಪ ಮತ್ತು ಚೆನ್ನಮ್ಮ ಧಣಿಗಳನ್ನು ತಿರಸ್ಕಾರದಿಂದ ನೋಡತೊಡಗಿದರು. ಈ ಎಲ್ಲ ಹಿನ್ನೆಲೆಯಲ್ಲಿ ಬೆಳ್ಳಿಲೋಟ ಕಂಡಾಗ ಧಣಿಯಲ್ಲಿ ಆತಂಕ, ಗಾಬರಿ, ಭಯ ಉಂಟಾಯಿತು.

**ಅಥವಾ**

**ಕಲಾಂ ಅವರು ಯಾವಾಗಲೂ ಸಾಧ್ಯತೆಗಳನ್ನು ಅರಸುವ ಆಶಾಜೀವಿ. ಹೇಗೆ? ವಿವರಿಸಿರಿ.**

ಕಲಾಂ ಅವರು ಶೀಘ್ರದಲ್ಲಿಯೇ ರಾಷ್ಟ್ರಪತಿಯಾಗಿ ಆಯ್ಕೆಗೊಳ್ಳುವವರಿದ್ದರು. ಅದಕ್ಕೆ ಕೆಲವೇ ದಿನಗಳ ಮೊದಲು ಕಲಾಂ ಅವರು ಹೈದರಾಬಾದಿನ ಒಂದು ಆಸ್ಪತ್ರೆಗೆ ಭೇಟಿ ಕೊಟ್ಟಿದ್ದರು. ಬುದ್ಧಿಮಾಂದ್ಯ ಮಕ್ಕಳ ಮೆದುಳಿನಲ್ಲಿ ಅಗತ್ಯ ಮಾಹಿತಿಗಳನ್ನು ನೀಡುವ 'ಚಿಪ್' ಅಳವಡಿಸಿ ಗುಣಪಡಿಸಲು ಸಾಧ್ಯವೇ ಎಂದು ಅವರು ವೈದ್ಯರನ್ನು ಪ್ರಶ್ನಿಸಿದರು. ಅದನ್ನು ಅಳವಡಿಸಿ ಬುದ್ಧಿಮಾಂದ್ಯತೆಯನ್ನು ನಿವಾರಿಸಬಹುದೆ ಎಂದು ಕೇಳಿದರು. ವೈದ್ಯರು ಸಾಧ್ಯತೆಯ ಬಗ್ಗೆ ಅನುಮಾನ ವ್ಯಕ್ತಪಡಿಸಿದರು. ಆಗ ಕಲಾಂ ಅವರು "ಸಾಧ್ಯವಿಲ್ಲ ಎಂದು ಹೇಳುವ ನೂರು ಕಾರಣಗಳ ಬಗ್ಗೆ ನನಗೆ ಆಸಕ್ತಿ ಇಲ್ಲ. ಅದು ಹೇಗೆ ಸಾಧ್ಯವಾಗುತ್ತದೆ ಎಂಬ ಒಂದು ಕಾರಣ ಹೇಳಬಲ್ಲಿರಾ?" ಎಂದು ಕೇಳಿದರು. ಈ ಘಟನೆಯಿಂದ ಕಲಾಂ ಅವರು ಯಾವಾಗಲೂ ಸಾಧ್ಯತೆಗಳನ್ನು ಅರಸುವ ಆಶಾಜೀವಿ ಎಂದು ಹೇಳಬಹುದು.

**II. ಯಾವ-ಯಾವ ಸಂಗತಿಗಳನ್ನು ಉಪೇಕ್ಷಿಸಬಾರದಾಗಿ ಸೋಮನಾಥನು ತಿಳಿಸಿದ್ದಾನೆ?**

ಬೇವು ಚಿಗುರಾಗಿದ್ದರೂ ಕಹಿಯೇ ಆಗಿರುತ್ತದೆ. ಇದು ಇನ್ನೂ ಚಿಗುರು ಎಂದು ಅಲಕ್ಷಿಸಲಾದೀತೆ? ಚೇಳು ಚಿಕ್ಕದು ಎಂದು ಮೈಮೇಲೆ ಹಾಕಿಕೊಂಡರೆ ಅದು ಕಚ್ಚದೆ ಬಿಡುವುದೆ? ಹಾಲನ್ನು ಕೊಟ್ಟು ಸಾಕಿದರೆ ಹಾವು ವಿಷ ಕಕ್ಕುವುದಿಲ್ಲವೇ? ಗಿಳಿಯನ್ನು ಸಾಕುವೆನೆಂದು ಗೂಬೆ ಮರಿಯನ್ನು ತಂದು ಸಾಕಿದರೆ ಅದು ಎಂದಿಗಾದರೂ ಗಿಳಿಯಾದೀತೇ? ವೈರಿ ಹೇಗಿದ್ದರೂ ವೈರಿಯೇ. ಆತ ಬಾಲಕನಾಗಿದ್ದರೂ ವೈರಿಯೇ ಎಂಬುದನ್ನು ಮರೆಯಬಾರದು. ಬದುಕಿನಲ್ಲಿ ಈ ಎಲ್ಲ ಸಂಗತಿಗಳನ್ನು ಉಪೇಕ್ಷಿಸಬಾರದಾಗಿ ಸೋಮನಾಥನು ತಿಳಿಸಿದ್ದಾನೆ.

**ಅಥವಾ**

**ಶಿಲುಬೆಗೇರಿದ ಜೀಸಸ್‌ನ ದೇಹ ಏನನ್ನು ಹೇಳುವಂತಿದೆ? ವಿವರಿಸಿ.**

ಶಿಲುಬೆಗೇರಿಸಿದರೂ ಏಸುವಿನ ಮುಖದಲ್ಲಿ ಕ್ಷಮಾ ಭಾವವೇ ಮೂರ್ತಿವೆತ್ತಂತೆ ತೋರುತ್ತಿದೆ. ಕೊಲೆಗಡುಕ ಬರಬ್ಬನ ವಕಾಲತ್ತು ನಡೆಸಿದವರೆ, ದೇವರು ನಿಮ್ಮನ್ನು ಕ್ಷಮಿಸಲಿ. ನನ್ನ ಎಡಕ್ಕೊಬ್ಬ, ಬಲಕ್ಕೊಬ್ಬನನ್ನು ತೂಗಿ ಹಾಕಿದ್ದೀರಿ. ನೀವೆಂತಹ ತಪ್ಪನ್ನು ಮಾಡುತ್ತಿದ್ದೀರಿ ಎಂಬ ಕಲ್ಪನೆಯೂ ನಿಮಗಿದ್ದಂತಿಲ್ಲ. ನಿಮ್ಮೆಲ್ಲರನ್ನೂ, ನಿಮ್ಮೆಲ್ಲರ ತಪ್ಪುಗಳನ್ನೂ ಆ ದೇವರು ಮನ್ನಿಸಲಿ. ನೀವು ಬಡಿದ ಸುತ್ತಿಗೆಗಳು, ಮಕುಟ ಹೆಣೆದ ಮುಳ್ಳುಗಳು ಸತ್ಯವಲ್ಲ. ಹಬ್ಬಿಸಿದ ಸುಳ್ಳುಗಳು ಕಾಲದೊಳಗಿನ್ನೂ ಸೇರಿಲ್ಲ. ವೇಷ ಮರೆಸಿವೆ ಅಷ್ಟೆ. ನೀವು ಬಗೆದ ಕೇಡು ಇತ್ಯಾದಿಗಳೆಲ್ಲ ಎಂದಿಗೂ ಶಾಶ್ವತವಲ್ಲ. ದೇವರೇ, ಇವರನ್ನೆಲ್ಲ ಕ್ಷಮಿಸಿಬಿಡು ಎಂದು ಶಿಲುಬೆಗೇರಿದ ಜೀಸಸ್‌ನ ದೇಹ ಹೇಳುವಂತಿದೆ.

**III. ನಿರೂಪಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲವೇಕೆ? ವಿವರಿಸಿ.**

ಕೆರೆ ಕೆಲಸಕ್ಕೆಂದು ಬಂದಿದ್ದ ಮಣ್ಣು ಒಡ್ಡರು ಅಗೆಯುವಾಗ ಅಡ್ಡಾಗುವ ಬೇರುಗಳನ್ನು ಕಡಿಯತೊಡಗಿದರು. ಆ ಕೊಡಲಿ ತೆಗೆದುಕೊಂಡು ಕಲ್ಲು ಮಣ್ಣು ನೋಡದೆ ಯರ್‍ರಾಬಿರ್‍ರಿ ಜಪ್ಪಿದ್ದರು. ಹೀಗಾಗಿ ಅದರ ಹಿಂಭಾಗ ಯಾವುದು ಮುಂಭಾಗ ಯಾವುದು ಎಂದು ಗೊತ್ತಾಗುತ್ತಿರಲಿಲ್ಲ. ಅದು ಹೇಳಲಾಗದಷ್ಟು ಹಾಳಾಗಿತ್ತು. ಎಲ್ಲ ಕಡೆ ಜಜ್ಜಿ ಹೋಗಿ ಅದನ್ನು ಸುತ್ತಿಗೆ ಎಂದು ಕರೆಯಬಹುದಿತ್ತು. ಅದು ತನ್ನ ಮೂಲ ಸ್ವರೂಪವನ್ನೇ ಕಳೆದುಕೊಂಡುಬಿಟ್ಟಿತ್ತು. ಈಗ ಅದು ಅಮೂಲ್ಯವಾದುದೇನೂ ಆಗಿರಲಿಲ್ಲ. ಆದ್ದರಿಂದ ನಿರೂಪಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲ.

**ಅಥವಾ**

**ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆಯನ್ನು ವಿವರಿಸಿ. ಅದು ಪೇಟೆಯಲ್ಲಿ ಏನು ಮಾಡುತ್ತಿತ್ತು?**

ಕೃಷ್ಣೇಗೌಡರ ಆನೆ ಕಾಡಿನಿಂದ ಹಿಡಿದು ತಂದು ಪಳಗಿಸಿದ ಆನೆಯಲ್ಲ. ಘಟ್ಟದ ಕೆಳಗಿದ್ದ ಗೂಳೂರು ಮಠದ ಆನೆ ಹಾಕಿದ ಮರಿಯೇ ಕೃಷ್ಣೇಗೌಡರ ಬಳಿಯಿದ್ದ ಆನೆ. ಅದು ಹುಟ್ಟಿದ್ದು, ಬೆಳೆದಿದ್ದು ಎಲ್ಲ ಊರಿನಲ್ಲಿ, ಜನಗಳ ನಡುವೆಯೇ. ಅದು ಮೂಡಿಗೆರೆಯ ಪೇಟೆಗೆ ಎಷ್ಟು ಒಗ್ಗಿಕೊಂಡಿತ್ತೆಂದರೆ ಯಾವ ಲಂಗುಲಗಾಮಿಲ್ಲದೆ ದನಕರುಗಳ ರೀತಿಯಲ್ಲಿ ಪೇಟೆಯೊಳಗೆ ತಿರುಗಿಕೊಂಡಿರುತ್ತಿತ್ತು. ದಾರಿ ಬದಿಯ ಪೆಟ್ಟಿಗೆ ಅಂಗಡಿಗಳವರು ಹಣ್ಣು ಖರ್ಚಾದ ಬಾಳೆಗೊನೆಗಳ ದಿಂಡುಗಳನ್ನೂ, ಸಿಪ್ಪೆಗಳನ್ನೂ, ಜಜ್ಜಿದ, ಹಾಳಾದ ಹಣ್ಣುಗಳನ್ನೂ ಅದಕ್ಕೆ ಕೊಡಲು ಇಡುತ್ತಿದ್ದರು. ಅದು ಖಾಯಮ್ಮಾಗಿ ಎಲ್ಲ ಅಂಗಡಿಗಳ ಬಳಿಗೂ ಹೋಗಿ ಅದನ್ನೆಲ್ಲ ತಿನ್ನುತ್ತಿತ್ತು. ಹಾಗೆ ಬೇಕಾಬಿಟ್ಟಿಯಾಗಿ ಬೆಳೆದು ಸಾಕಷ್ಟು ಕೊಬ್ಬಿತ್ತು. ಇದು ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆ ಮತ್ತು ಪೇಟೆಯಲ್ಲಿ ಮಾಡುತ್ತಿದ್ದ ಕೆಲಸವಾಗಿದೆ.

**ಪ್ರಶ್ನೆ 14 ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಿಷಯದ ಬಗ್ಗೆ 150-200 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ. 5 X 1 = 05**

ಇದಕ್ಕೆ ಅಂಕ ನೀಡಿಕೆ ಹೀಗಿದೆ : ಪೀಠಿಕೆ-1, ವಿಷಯ ವಸ್ತುವಿಗೆ- 2, ಭಾಷಾಶೈಲಿ-1, ಉಪಸಂಹಾರ-1.

**ಪ್ರಶ್ನೆ 15. ಕನ್ನಡ ನಾಡು-ನುಡಿಯನ್ನು ಅಭಿವೃದ್ಧಿಗೊಳಿಸುವ ಕುರಿತು ನಿಮ್ಮ ಗೆಳೆಯನಿಗೆ ಒಂದು ಪತ್ರ ಬರೆಯಿರಿ 5 X 1 = 05**

ವೈಯಕ್ತಿಕ ಪತ್ರಕ್ಕೆ ಅಂಕ ನೀಡಿಕೆ ಹೀಗಿದೆ : ಇಂದ/ಸ್ಥಳ-1, ಪ್ರೀತಿಯ ಗೆಳೆಯನಿಗೆ ಇತ್ಯಾದಿ ಆರಂಭಕ್ಕೆ -1, ಪತ್ರದ ಒಡಲು-2, ಮುಕ್ತಾಯ, ಸಹಿ-1.

**ಅಥವಾ**

ನಿಮ್ಮ ಊರಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಸಲು ಕೋರಿ ಸಂಬಂಧಿಸಿದ ಇಲಾಖಾ ಮುಖ್ಯಸ್ಥರಿಗೆ ಪತ್ರವೊಂದನ್ನು ಬರೆಯಿರಿ.

ವ್ಯಾವಹಾರಿಕ ಪತ್ರಕ್ಕೆ ಅಂಕ ನೀಡಿಕೆ ಹೀಗಿದೆ : ಇಂದ/ಸ್ಥಳ-1, ಮಾನ್ಯರೇ, ವಿಷಯ-1, ಪತ್ರದ ಒಡಲು-2, ಮುಕ್ತಾಯ, ಸಹಿ-1.

*********************